ಓ.ಎಸ್‌ಃ 371/2018

ಪಿ.ಡಬ್ಲ್ಯೂಃ 01

**<u>ದಿನಾಂಕಃ 18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 1 ನೇ ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಕೆ. ವಕೀಲರಿಂದಃ</u>**

1. ನಾನು ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತೇನೆ. ದಾವೆಯನ್ನು ನಾನು ದಾವಾ ಆಸ್ತಿಯನ್ನು ಪಡೆಯಬೇಕೆಂದು ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ.142 ಕ್ಷೇತ್ರ 6 ಎಕರೆ 16 ಗುಂಟೆ ಇರುತ್ತದೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹಿರಿಯರ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ 3 ಎಕರೆ 7 ಗುಂಟೆ ಇರುತ್ತದೆ. 2 ನೇ ಪ್ರತಿವಾದಿಗೆ 1 ಎಕರೆ 20 ಗುಂಟೆ ಇರುತ್ತದೆ. 3 ಮತ್ತು 4 ನೇ ಪ್ರತಿವಾದಿಗೆ 1 ಎಕರೆ 24 ಗುಂಟೆ ಇರುತ್ತದೆ.

2. ನಿಪಿ-3 ಮಾಡಲಾಗಿದೆ ಎಂದು ಹೇಳುವ ಸಮಯದಲ್ಲಿ ಮಹಾದೇವಪ್ಪನ ಹಿಸ್ಸಾ ಹಿರಿಯರ ಆಸ್ತಿ ಎಂದು ಗೊತ್ತಿತ್ತು. 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಅಲ್ಲ ಎಂದರೆ ಸಾಕ್ಷಿಯು ಮಹಾದೇವಪ್ಪನ ಹೆಸರಿಲ್ಲಿ ಇತ್ತು ಎಂದು ನುಡಿಯುತ್ತಾರೆ. ಮಹಾದೇವಪ್ಪ ಹೆಂಡತಿ ಮತ್ತು ಮಕ್ಕಳು ಸಹಿಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರು ಸ್ಥಳದಲ್ಲಿ ಹಾಜರಿದ್ದರು ಎಂದು ನುಡಿಯುತ್ತಾರೆ. ಯಲಗೂರದ ಗುಡಿಯಲ್ಲಿ ಹಾಜರಿದ್ದರು ಎಂದು ನುಡಿಯುತ್ತಾರೆ. ನಿಪಿ-3 ಬ.ಬಾಗೇವಾಡಿಯಲ್ಲಿ ತಯಾರಿಸಲಾಗಿರುತ್ತದೆ. 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ನಿಪಿ-3 ಕ್ಕೆ ಸಹಿ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯ ಹೆಂಡತಿಯ ಮಕ್ಕಳಿಗೆ ಗೊತ್ತಾಗದೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಆಸ್ತಿಯನ್ನು ಮಾರಾಟ ಮಾಡಿದ್ದು ಯಾವ ಅಡಚಣೆಯ ಸಲುವಾಗಿ ಮಾರಾಟ ಮಾಡಿರುತ್ತಾನೆ ಎಂದು ನಾನು ಕೇಳಿರುವುದಿಲ್ಲ.

3. ದಾವಾ ಆಸ್ತಿಯಲ್ಲಿ ಕಬ್ಬು, ಗೋವಿನ ಜೋಳ ಬೆಳೆಯುತ್ತಾರೆ ಎಂದರೆ ಸಾಕ್ಷಿಯು ತೋಗರಿ ಮತ್ತು ಜೋಳ ಬೆಳೆಯುತ್ತೇವೆ, ನೀರಾವರಿ ಜಮೀನು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಜಮೀನಿನಿಂದ 1 ನೇ ಪ್ರತಿವಾದಿಗೆ ಸಾಕಷ್ಟು ಆದಾಯ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಯು

ಯಲಗೂರದಲ್ಲಿ ಇರುವ ದೇವಸ್ಥಾನದ ಪೂಜಾರಿ ಎಂದರೆ ಸರಿ. ಸದರಿ ದೇವಸ್ಥಾನ ಪ್ರಸಿದ್ಧವಾದ ದೇವಸ್ಥಾನ ಎಂದರೆ ಸರಿ. ಸದರಿ ದೇವಸ್ಥಾನದಿಂದ ಸಾಕಷ್ಟು ಆದಾಯ ಬರುತ್ತದೆ ಎಂದರೆ ಸರಿ. ಸಾಕಷ್ಟು ಆದಾಯ ಇರುವ ಕಾರಣ ಮಾರಾಟ ಮಾಡುವ ಅವಶ್ಯಕತೆ ಇರಲ್ಲಿಲ್ಲಾ ಎಂದರೆ ಸರಿಯಲ್ಲ.

4. ದಿಃ01.06.2006 ರಂದು ಕರಾರು ಪತ್ರ ಆಗಿರುತ್ತದೆ. ದಿಃ25.05.2006 ರಂದು ಮಾತುಕತೆ ಆಗಿರುತ್ತದೆ. ಆ ಸಮಯದಲ್ಲಿ 1ನೇ ಪ್ರತಿವಾದಿ, ಆತನ ಹೆಂಡತಿ, ನೀಲವ್ವ, ಹಣಮಂತ, ಭೀಮಪ್ಪ ಮತ್ತು ಸಾಕ್ಷಿದಾರರಾದ ಸಂಗಪ್ಪ, ಚಂದ್ರಶೇಖರ ಹಾಗೂ ನಾನು ಹಾಜರಿದ್ದೇವು. ಒಟ್ಟು ಆಸ್ತಿ 3,50,000/- ಗಳಿಗೆ ಮಾತುಕತೆ ಆಗಿರುತ್ತದೆ. ಹಿಸಾರ ಅಂತಾ 50,000/- ಹಣವನ್ನು 1ನೇ ಪ್ರತಿವಾದಿಗೆ ನೀಡಿರುತ್ತೇನೆ. ಎಲ್ಲರಿಗೂ ಸೇರಿ ಹಣವನ್ನು ನೀಡಿರುತ್ತೇನೆ. 1ನೇ ಪ್ರತಿವಾದಿಯ ಹಿಸ್ಸಾ ಆಗಿರುವುದಿಲ್ಲ. ಒಟ್ಟಾಗಿ ಹಣವಾಗಿರುತ್ತದೆ. ಹಣವನ್ನು 1 ಮತ್ತು 2ನೇ ಪ್ರತಿವಾದಿಯರ ಒಂದೊಂದು ಪಾಲು ಮತ್ತು 3 ಮತ್ತು 4ನೇ ಪ್ರತಿವಾದಿಯರದು ಒಂದು ಪಾಲು ತಗೆದುಕೊಳ್ಳಬೇಕಾಗುತ್ತದೆ ಎಂದು ಮಾತುಕತೆ ಆಗಿರುತ್ತದೆ. ಒಟ್ಟು 3,50,000/- ನೀಡುವುದು ಮಾತುಕತೆ ಆಗಿರುತ್ತದೆ.

5. ದಿಃ 01.06.2006 ರಂದು ಎಲ್ಲರು ಹೋಗಿರುತ್ತೇವೆ. ಖರೀದಿ ಪತ್ರವನ್ನು 1ನೇ ಪ್ರತಿವಾದಿಯೇ ತಯಾರಿಸಿರುತ್ತಾರೆ. ಆ ಸಮಯದಲ್ಲಿ 2,50,000/- ಹಣವನ್ನು ನೀಡಿರುತ್ತೇನೆ. ಪ್ರತಿವಾದಿಯರಿಗೆ ನಾನು ಸದರಿ ದಿನಗಳಲ್ಲಿ ಮೇಲೆ ಹೇಳಿದಂತೆ ಹಣ ನೀಡಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಯರು ಮಾರಾಟ ಮಾಡಿದ ಜಮೀನು ಫಲವತ್ತಾಗಿರುತ್ತದೆ. ನಿಪಿ-3 ನ್ನು ಪ್ರತಿವಾದಿಯರು ಬರೆದು ಕೊಟ್ಟಿಲ್ಲ. ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ರಿಂದ 4ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿ. ಸದರಿಯವರು ನನ್ನ ಜೊತೆ ಚನ್ನಾಗಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸಾಕ್ಷಿದಾರರ ಜೊತೆ ಮತ್ತು 2 ರಿಂದ 4 ನೇ ಪ್ರತಿವಾದಿಯರ ಜೊತೆ ಮಿಲಾಪೆಯಾಗಿ ದಾಖಲಾತಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ತಯಾರಿಸುವ ಸಮಯದಲ್ಲಿ 1 ನೇ ಪ್ರತಿವಾದಿಯ ವಯಸ್ಸು 70-75 ಆಗಿತ್ತು. 1 ನೇ ಪ್ರತಿವಾದಿಯು ವಯಸ್ಸಾಗಿರುವ ಕಾರಣ ಅರುವು-ಮರವು ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮಧ್ಯಪಾನ ಮಾಡುತ್ತಿದ್ದ ಎಂದರೆ ಸರಿ. ಮಧ್ಯಪಾನ ಮಾಡುತ್ತಿರುವ ಕಾರಣ 2 ರಿಂದ 4 ನೇ ಪ್ರತಿವಾದಿಯರ ಜೊತೆ ಮಿಲಾಪೆಯಾಗಿ ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ನಿಪಿ-3 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

6. 2 ರಿಂದ 4 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಸಂಬಂಧಿಕರು ಎಂದರೆ ಸರಿ. 1 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಯ ಮಾತು ಕೇಳುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಯರ ಮೇಲೆ ವಿಶ್ವಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೇಲೆ ಸರ್ಕಾರದಿಂದ ಹಣ ಬರುತ್ತದೆ ಎಂದು ಹೇಳಿ ನಿಪಿ-3 ನ್ನು ಸೃಷ್ಟಿಸಿ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ನಿಪಿ-3 ರಲ್ಲಿ ಇರುವ ಸಂಗತಿಗಳು ಗೊತ್ತಿಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯು ರಾಜ್ಯ ಹೆದ್ದಾರಿಗೆ ಮತ್ತು ಆಲಮಟ್ಟಿ ಜಲಾಶಯಕ್ಕೆ ಸಮೀಪ ಇರುವ ಕಾರಣ ಆಸ್ತಿಯು ಬೆಲೆ ಬಾಳುವುದು ಆಗಿರುತ್ತದೆ ಎಂದರೆ ಸಾಕ್ಷಿಗೆ ರಾಜ್ಯ ಹೆದ್ದಾರಿಗೆ ಮತ್ತು ಆಲಮಟ್ಟಿ ಜಲಾಶಯಕ್ಕೆ ಯಾವುದೇ ಸಂಪರ್ಕ ಇರುವುದಿಲ್ಲ ಎಂದು ನುಡಿಯುತ್ತಾರೆ.

8. ಈಗ 1 ಎಕರೆಗೆ 25 ಲಕ್ಷ ರೂಗಳ ಬೆಲೆ ಬಾಳುವುದಾಗಿದೆ ಎಂದರೆ ಸರಿಯಲ್ಲ. ಸನ್ 2006 ರಲ್ಲಿ 10 ರಿಂದ 12 ಲಕ್ಷ ರೂಗಳು ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಕಡಿಮೆ ಹಣಕ್ಕೆ ಮಾರಾಟ ಮಾಡುವ ಅವಶ್ಯಕತೆ ಇರಲ್ಲಿಲ್ಲಾ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಯ ಜಮೀನಿಕ್ಕಿಂತ ಎರಡುಪಟ್ಟು ಹೆಚ್ಚಿನ ಜಮೀನು 1 ನೇ ಪ್ರತಿವಾದಿಯದ್ದು ಆಗಿರುತ್ತದೆ ಎಂದರೆ ಸರಿ. 1 ನೇ

ಪ್ರತಿವಾದಿಗೆ ಸಾಕಷ್ಟು ಬಾರಿ ಕರಾರು ಪತ್ರವನ್ನು ಮಾಡಿಕೊಡಬೇಕೆಂದು ಕೇಳಿರುತ್ತೇನೆ. ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕಷ್ಟು ಬಾರಿ 1ನೇ ಪ್ರತಿವಾದಿಗೆ ವಿನಂತಿಸಿಕೊಂಡಿರುತ್ತೇನೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. 1ನೇ ಪ್ರತಿವಾದಿಯು ಮರಣ ಹೊಂದಿರುತ್ತಾನೆ ಎಂದರೆ ಸರಿ. 1ನೇ ಪ್ರತಿವಾದಿಯ ಆಸ್ತಿಗೆ ಕಬ್ಜಾದಲ್ಲಿ 1ನೇ ಪ್ರತಿವಾದಿಯ ವಾರಸುದಾರರು ಇರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯು ಯಾವುದೇ ಮಾರಾಟ ಮಾಡುವ ಅಡಚಣೆ ಇರಲ್ಲಿಲ್ಲಾ ಎಂದರೆ ಸಾಕ್ಷಿಯು ಬೇರೆ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಬೇರೆ ಆಸ್ತಿಗಳನ್ನು ಯಾವ ದಿನಾಂಕದಂದು ಮಾರಾಟ ಮಾಡಿರತ್ತಾರೆ ಎಂದು ಹೇಳಲು ಬರುವುದಿಲ್ಲ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮಾರಾಟ ಮಾಡುವ ಅಧಿಕಾರ ಇರಲ್ಲಿಲ್ಲಾ ಎಂದರೆ ಸರಿಯಲ್ಲ. ನಿಪಿ-3 ಪ್ರತಿವಾದಿ ನಂ.1 ರ ವಾರಸುದಾರರಿಗೆ ಬಂಧನಕಾರಿ ಆಗುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಒಬ್ಬಳೆ ಮಗಳು ಇರುವ ಕಾರಣ ನಿಪಿ-3 ನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**